# ಪವಿತ್ರತೆಯ ಅದ್ಭುತ ಬೋಧಕ

ಬುದ್ಧದೇವನ ಜನ್ಮಗ್ರಹಣವಾದಾಗ ಆತನ ಮುಖಮುದ್ರೆ ಎಷ್ಟು ನಿರ್ಮಲವಾಗಿತ್ತೆಂದರೆ ಯಾರೇ ಆಗಲಿ ಆತನ ವದನವನ್ನು ದೂರದಿಂದ ನೋಡಿದರೂ ಆ ವ್ಯಕ್ತಿ ಈ ಬಾಹ್ಯಾಚರಣೆಗಳ ಆಡಂಬರದ ಧರ್ಮಕ್ಕೆ ವಿದಾಯ ಹೇಳಿ, ಸಂನ್ಯಾಸಿಯಾಗಿ, ಮುಕ್ತನಾಗುತ್ತಿದ್ದನು. ಆಗ ದೇವತೆಗಳೆಲ್ಲ ಕಂಗಾಲಾಗಿ, "ಇನ್ನು ನಮಗೆ ಉಳಿಗಾಲವಿಲ್ಲ" ಎಂಬುದನ್ನು ಕಂಡರು. ಕಾರಣ, ಈ ದೇವತೆಗಳೆಲ್ಲ ಈ ಬಾಹ್ಯಾಚರಣೆಯ ಯಜ್ಞಯಾಗಾದಿಗಳ ಹವಿಸ್ಸಿನ ಮೇಲೆಯೇ ಬದುಕಿರುತ್ತಾರೆ. ಈ ಯಜ್ಞಯಾಗಾದಿಗಳೆಲ್ಲ ನಿಂತು ಹೋದೊಡನೆ ದೇವತೆಗಳೆಲ್ಲ ಹಸಿವಿನಿಂದ ಸೊರಗಿ ಸಾಯುವ ಸ್ಥಿತಿಯಲ್ಲಿದ್ದರು. ಆಗ ದೇವತೆಗಳೆಲ್ಲಾ ಸೇರಿ, "ಹೇಗಾದರೂ ಸರಿಯೇ ನಾವು ಈ ಮನುಷ್ಯನ ಹುಟ್ಟಡಗಿಸಲೇಬೇಕು. ಅವನ ಪವಿತ್ರತೆಯ ತಾಪ ನಮ್ಮ ಜೀವನಕ್ಕೇ ಸಂಚಕಾರವಾಗಿದೆ" ಎಂದು ಸಮಾಲೋಚಿಸಿ ಬುದ್ಧದೇವನ ಬಳಿಗೆ ಬಂದು "ಹೇ ಸೌಮ್ಯ, ನಿನ್ನಲ್ಲಿ ನಮ್ಮದೊಂದು ಕೋರಿಕೆಯಿದೆ. ನಾವೊಂದು ಮಹಾಯಾಗವನ್ನು ಮಾಡಲು ಹೊರಟಿದ್ದೇವೆ. ಅದಕ್ಕಾಗಿ ಅಗ್ನಿಯನ್ನು ಪ್ರಜ್ವಲಿಸಲು ಒಂದು ಪವಿತ್ರ ಸ್ಥಾನಕ್ಕಾಗಿ ಇಡೀ ಪ್ರಪಂಚದಲ್ಲೆಲ್ಲಾ ಹುಡುಕಾಟ ನಡೆಸಿದರೂ ಅಂತಹ ಸ್ಥಾನ ನಮಗೆ ಕಾಣಸಿಗಲಿಲ್ಲ... ನೀನೇನಾದರೂ ಅಂಗಾತ ಮಲಗಿದರೆ ನಿನ್ನ ಹೃತ್ ಪ್ರದೇಶದ ಮೇಲೆ ನಾವು ದೊಡ್ಡ ಅಗ್ನಿಯನ್ನು ಪ್ರಜ್ವಲಿಸುತ್ತೇವೆ" ಎಂದು ನುಡಿದರು. ಅದಕ್ಕೆ ಬುದ್ಧದೇವನು "ಹಾಗೆಯೇ ಆಗಲಿ, ನಿಮ್ಮ ಯಾಗವನ್ನು ಆರಂಭಿಸಿ" ಎಂದನು.

ಆಗ ಆ ದೇವತೆಗಳು ಆತನ ವಿಶಾಲಹೃದಯದ ಮೇಲೆ ಅಗಾಧವಾದ ಅಗ್ನಿಯನ್ನು ಪ್ರಜ್ವಲಿಸಿದರು. ದೇವತೆಗಳೆಂದುಕೊಂಡರು, ಬುದ್ಧದೇವನು ಸತ್ತನೆಂದು. ಆದರೆ ಆತ ಸತ್ತಿರಲಿಲ್ಲ. ಆಗ ದೇವತೆಗಳೆಲ್ಲಾ ಹತಾಶರಾಗಿ, "ಇನ್ನು ನಮ್ಮ ಕತೆ ಮುಗಿಯಿತು" ಎಂದು ಗೊಂದಲದಲ್ಲಿ ಮುಳುಗಿದರು. ಅನಂತರ ಏನು ಮಾಡಲೂ ತೋಚದೆ, ಆ ದೇವತೆಗಳೆಲ್ಲಾ ಸೇರಿ ಆತನ ಮೇಲೆ ಪ್ರಹಾರಗಳ ಸುರಿಮಳೆಯನ್ನೇ ಆರಂಭಿಸಿದರು. ಅದರಿಂದಲೂ ಅವರು ಅವನನ್ನು ಕೊಲ್ಲಲಾಗಲಿಲ್ಲ. ಆಗ ಆ ಅಗ್ನಿಕುಂಡದಿಂದ ಧ್ವನಿಯೊಂದು ಮೂಡಿಬರುತ್ತದೆ: "ನೀವೇಕೆ ಇಷ್ಟೆಲ್ಲಾ ವೃಥಾ ಪ್ರಯಾಸ ಮಾಡುತ್ತಿದ್ದೀರಿ?" ಆಗ ದೇವತೆಗಳು "ನಾವೇನು ಮಾಡುವುದು? ನಿನ್ನ ಪವಿತ್ರ ಮುಖಮುದ್ರೆಯನ್ನು ನೋಡಿದ ಯಾರೇ ಆಗಲಿ ಪೂತಾತ್ಮರಾಗಿ ಮುಕ್ತರಾಗಿ ಬಿಡುತ್ತಾರೆ. ನಮ್ಮ ಉಪಾಸನೆ ಮಾಡಿ ನಮಗೆ ಹವಿಸ್ಸನ್ನು ಕೊಡುವವರು ಯಾರೂ ಇಲ್ಲ" ಎಂದರು. ಆಗ ಆ ಧ್ವನಿ "ಹಾಗಾದರೆ ನಿಮ್ಮ ಶ್ರಮ ವ್ಯರ್ಥವೇ ಸರಿ. ಕಾರಣ, ಪವಿತ್ರತೆಯನ್ನು ಎಂದಿಗೂ ಕೊಲ್ಲಲಾಗುವುದಿಲ್ಲ" ಎನ್ನುತ್ತದೆ.

ಈ ಪೌರಾಣಿಕ ದಂತಕಥೆ ಅವನಿಗೆ ಆಗದವರಿಂದ, ಅವನ ವೈರಿಗಳಿಂದ ಬರೆಯಲ್ಪಟ್ಟಿದೆ. ಆದರೂ ಬುದ್ಧನಿಗೆ ಅಂಟಿಸಲಾಗಿರುವ ಒಂದೇ ಒಂದು ಕಳಂಕವೆಂದರೆ, ಅವನೊಬ್ಬ ಪವಿತ್ರತೆಯ ಅದ್ಭುತವಾದ ಬೋಧಕನಾಗಿದ್ದನೆಂಬುದು!

ಒಮ್ಮೆ ಐದುಜನ ಬ್ರಾಹ್ಮಣ ಯುವಕರು ಒಂದು ಸಮಸ್ಯೆಯ ಬಗ್ಗೆ ಕಿತ್ತಾಡುತ್ತಾ ಬುದ್ಧನ ಮೊರೆಹೊಕ್ಕರು. ಅವರಲ್ಲಿ ಒಬ್ಬನೆಂದನು "ನನ್ನ ಹಿರಿಯರು ಬೋಧಿಸಿರುವುದು ಇದನ್ನೇ. ಸತ್ಯಕ್ಕೆ ಇದೊಂದೇ ಮಾರ್ಗವಿರುವುದು." ಮತ್ತೊಬ್ಬಾತ : "ಆದರೆ ನನಗೆ ಬೇರೆ ರೀತಿಯಾಗಿ ಬೋಧಿಸಲಾಗಿದೆ ಮತ್ತು ಅದು ಮಾತ್ರವೇ ಸತ್ಯಕ್ಕಿರುವ ಏಕೈಕ ಮಾರ್ಗ" ಎಂದನು. ಹೀಗೆಯೇ ಒಬ್ಬೊಬ್ಬರೂ ನುಡಿದು, "ಹೇ ಮಹಾಶಯ! ಇವುಗಳಲ್ಲಿ ಯಾವುದು ಸರಿಯಾದ ಮಾರ್ಗ?" ಎಂದು ಕೇಳಿದರು.

ಹೀಗೆ ಅವರೆಲ್ಲರೂ ಬುದ್ಧನಲ್ಲಿ ಈ ರೀತಿಯ ತಮ್ಮ ಸಮಸ್ಯೆಯನ್ನು ಅರುಹಿದ ಮೇಲೆ ಬುದ್ಧನು ಆ ಐವರಲ್ಲಿ ಒಬ್ಬನನ್ನು ಕುರಿತು "ನೀನು ದೇವರನ್ನು ನೋಡಿದ್ದೀಯಾ" ಎಂದನು. ಅದಕ್ಕಾತ "ಇಲ್ಲ" ಎನ್ನಲು, ಬುದ್ಧನು "ನಿಮ್ಮ ತಂದೆ?" ಎಂದನು. "ಇಲ್ಲ, ಆತನೂ ನೋಡಿಲ್ಲ" ಎಂದನು. "ನಿಮ್ಮ ತಾತ", "ಇಲ್ಲ ಮಹಾಶಯ, ಆತನೂ ಕಂಡಿಲ್ಲ" ಎಂದನು. ಆಗ ಬುದ್ಧನು ಇದೇ ರೀತಿಯ ಪ್ರಶ್ನೆಗಳನ್ನು ಮಿಕ್ಕೆಲ್ಲರಿಗೂ ಕೇಳಿದಾಗ ಅವರೆಲ್ಲರೂ ಸಹ ಯಾರೊಬ್ಬರೂ ದೇವರನ್ನು ಕಂಡೇ ಇಲ್ಲ ಎಂದು ದೃಢವಾಗಿ ಸಾರಿ ಹೇಳಿದರು. ಆಗ ಬುದ್ಧನು ಅವರಿಗೆಲ್ಲ ಒಂದು ದೃಷ್ಟಾಂತ ಕಥೆಯನ್ನು ಹೇಳಿದನು: ಒಂದಾನೊಂದು ಹಳ್ಳಿಗೆ ಒಬ್ಬ ಯುವಕ ಬಂದು "ಅಯ್ಯೋ! ನಾನು ಅವಳನ್ನೆಷ್ಟು ಉತ್ಕಟವಾಗಿ ಪ್ರೀತಿಸುತ್ತೇನೆ" ಎಂದು ಪ್ರಲಾಪಿಸುತ್ತಾ ಹುಯಿಲಿಡುತ್ತಿದ್ದನು. ಅದನ್ನು ಕೇಳಿ ಹಳ್ಳಿಯವರೆಲ್ಲ ಬಂದು ಸೇರಿದರು. ಅವನು ಹೇಳುತ್ತಿದ್ದುದೊಂದೇ, ತಾನು ಅವಳನ್ನೆಷ್ಟು ಪ್ರೀತಿಸುತ್ತೇನೆಂದು. ಅವರೆಲ್ಲ, "ನೀನು ಅಷ್ಟೊಂದು ಪ್ರೇಮಿಸಿದ ಆ ನಿನ್ನ ಪ್ರೇಯಸಿ ಯಾರು?" ಎಂದು ಕೇಳಿದರು. ಅದಕ್ಕವನು "ನನಗೆ ಗೊತ್ತಿಲ್ಲ" ಎಂದನು. "ಆಕೆ ಎಲ್ಲಿ ವಾಸವಾಗಿದ್ದಾಳೆ?" ಎಂದಾಗ, "ಅದೂ ನನಗೆ ಗೊತ್ತಿಲ್ಲ" ಎಂದನು. ಹಳ್ಳಿಯವರು, "ಹೋಗಲಿ, ಆಕೆ ನೋಡಲು ಹೇಗಿದ್ದಾಳೆ?" ಎಂದಾಗ, ಅದಕ್ಕೂ ಸಹ ಆತ "ಇಲ್ಲ, ಅದೂ ನನಗೆ ಗೊತ್ತಿಲ್ಲ. ಆದರೆ ಅವಳನ್ನು ನಾನು ಬಹಳವಾಗಿ ಪ್ರೀತಿಸಿದೆ" ಎಂದನು.

ನಂತರ ಬುದ್ಧನು ಆ ಯುವಕರನ್ನು ಕುರಿತು, "ಮಿತ್ರರೇ, ಹಾಗೆ ಪ್ರಲಾಪಿಸುತ್ತಿರುವ ಆ ತರುಣನನ್ನು ಏನೆನ್ನಬೇಕು?" ಎಂದನು. ಅವರೆಲ್ಲ "ಅವನೊಬ್ಬ ಶುದ್ಧ ಮುಠ್ಠಾಳನೇ ಸರಿ! ತಾನು ಅವಳನ್ನು ಪ್ರೀತಿಸುತ್ತೇನೆ ಎಂದೆಲ್ಲಾ ಯಾರಿಗಾಗಿ ಪ್ರಲಾಪಿಸುತ್ತಿದ್ದಾನೋ ಅವಳನ್ನು ಅವನೆಂದೂ ಕಂಡಿಲ್ಲ." ಎಂದು ದೃಢವಾಗಿ ಹೇಳಿದರು. ಆಗ ಬುದ್ಧದೇವನು, "ನೀವೂ ಹಾಗೆಯೇ ಅಲ್ಲವೇ? ನಿಮಗಾಗಲೀ ನಿಮ್ಮ ಪೂರ್ವಜರಿಗಾಗಲೀ, ಯಾರ ಬಗ್ಗೆ ಏನೂ ಗೊತ್ತಿಲ್ಲವೋ ಅಂತಹ ದೇವರಿಗೋಸ್ಕರ ಪರಸ್ಪರ ಕಿತ್ತಾಡುವ ನಿಮ್ಮನ್ನೇನೆನ್ನಬೇಕು? ಇರಲಿ, ನಿಮ್ಮ ತಂದೆ, ಆ ದೇವರು ದುಷ್ಟ ಎಂದು ಎಂದಾದರೂ ಬೋಧಿಸಿದ್ದಾನೆಯೇ?" ಎಂದಾಗ ಅವರೆಲ್ಲ "ಇಲ್ಲ, ಎಂದಿಗೂ ಇಲ್ಲ. ಆತನು ಯಾವಾಗಲೂ ಪರಿಶುದ್ಧ ಎಂದೇ ಬೋಧಿಸಿದ್ದಾರೆ" ಎಂದರು. ಆಗ ಬುದ್ಧನು "ಈಗ ನೀವೆಲ್ಲ ಹೀಗೆ ವಾದ ಮಾಡಿ ಕಿತ್ತಾಡುತ್ತಾ ಪರಸ್ಪರ ಬಡಿದಾಡಿಕೊಳ್ಳುವುದಕ್ಕಿಂತಲೂ, ಪರಿಶುದ್ಧರಾಗಿ ಸನ್ಮಾರ್ಗಾವಲಂಬಿಗಳಾದರೆ, ಆ ದೇವರ ಸಮೀಪಕ್ಕೆ ನೀವು ಬರುವ ಸಂಭವ ಹೆಚ್ಚು ಎಂದೆನಿಸುವುದಿಲ್ಲವೆ? ಆದ್ದರಿಂದ ನಾನು ಹೇಳುವುದಿಷ್ಟೆ: ನೀವೆಲ್ಲ ಪರಿಶುದ್ಧರಾಗಿ, ಪರಿಶುದ್ಧವಾದ ಅಂತಃಕರಣದಿಂದ ಪ್ರತಿಯೊಬ್ಬರನ್ನೂ ಪ್ರೀತಿಸಿ, ಅಷ್ಟೇ ನೀವು ಮಾಡಬೇಕಾದುದು."

*( ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ )*